**ಕರ್ನಾಟಕ ಸರ್ಕಾರ ನಡವಳಿಗಳು**

ವಿಷಯ : 2015-16ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಆವರ್ತಕ ವೆಚ್ಚಗಳಿಗಾಗಿ ಮೂರು ಮತ್ತು ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ/36/ಜೈಅಯೋ/2015 ಬೆಂಗಳೂರು, ದಿನಾಂಕ 19.05.2015 ಮತ್ತು 06.08.2015.
2. MGIRED ರವರ ಪತ್ರ ದಿನಾಂಕ 19.12.2015.

**ಪ್ರಸ್ತಾವನೆ :**

**2015-16**ನೇ ಸಾಲಿನಲ್ಲಿ ರಾಜ್ಯ ಆಯವ್ಯಯದಡಿ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಗೆ (MGIRED) **ರೂ.202.00**ಲಕ್ಷಗಳನ್ನು ಸಂಸ್ಥೆ ಆವರ್ತಕ ವೆಚ್ಚಗಳಿಗಾಗಿ ಒದಗಿಸಿದ್ದು, ಈ ಪೈಕಿ ಈಗಾಗಲೇ ಶೇ.50 ರಷ್ಟು ಅಂದರೆ **ರೂ.101.00** ಲಕ್ಷಗಳನ್ನು ಸಂಸ್ಥೆಯ ಆವರ್ತಕ ವೆಚ್ಚಗಳಿಗಾಗಿ ಬಿಡುಗಡೆ ಮಾಡಿದೆ.

ಮೇಲೆ (2)ರಲ್ಲಿ ಓದಲಾದಂತೆ, ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರ ಕೋರಿಕೆಯನ್ವಯ **2015-16**ನೇ ಸಾಲಿನ ಮೂರು & ನಾಲ್ಕನೇ ಕಂತಿನ ಅನುದಾನ **ರೂ.101.00**ಲಕ್ಷಗಳನ್ನು ಸಂಸ್ಥೆಯ ಆವರ್ತಕ ವೆಚ್ಚಗಳಿಗಾಗಿ ಲೆಕ್ಕ ಶೀರ್ಷಿಕೆ **2501-04-105-0-02-059(ಯೋಜನೆ)**ಯಡಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/36/ಜೈಅಯೋ/2015 ಬೆಂಗಳೂರು, ದಿನಾಂಕ 27.01.2016.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2015-16**ನೇ ಸಾಲಿನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರುರವರಿಗೆ ಸಂಸ್ಥೆಯ ಆವರ್ತಕ ವೆಚ್ಚಗಳಿಗಾಗಿ ಮೂರು & ನಾಲ್ಕನೇ ಕಂತಿನ ಅನುದಾನ **ರೂ.101.00**ಲಕ್ಷಗಳನ್ನು (ಒಂದು ನೂರಾ ಒಂದು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಿ ಆದೇಶಿಸಿದೆ.

ಸದರಿ ಅನುದಾನವನ್ನು ಲೆಕ್ಕ ಶೀರ್ಷಿಕೆ **2501-04-105-0-02-059(ಯೋಜನೆ)**ಯಡಿ ಭರಿಸತಕ್ಕದ್ದು.

ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆರವರು ಗ್ರಾಂಟ್-ಇನ್-ಏಡ್ ಬಿಲ್ಲನ್ನು ಸಲ್ಲಿಸಿ, ನಿರ್ದೇಶಕರು (ಗ್ರಾಮೂಸೌ-2) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿರವರ ಮೇಲು ರುಜು ಪಡೆದು, ಖಜಾನೆಯಿಂದ ಅನುದಾನ ಪಡೆಯತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸುವುದು ಹಾಗೂ ಬಿಡುಗಡೆಯಾದ ಅನುದಾನಕ್ಕೆ ವೆಚ್ಚದ ವಿವರಗಳನ್ನು ಸರ್ಕಾರಕ್ಕೆ ನಿಗದಿತವಾಗಿ ಸಲ್ಲಿಸುವುದು.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ : ಗ್ರಾಅಪ 775 ಪಿಬಿಎಸ್ 2015 ದಿನಾಂಕ 25.01.2016ರಲ್ಲಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಡಕ, ಬೆಂಗಳುರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಜಕ್ಕೂರು, ಬೆಂಗಳೂರು.
3. ಜಂಟಿ ನಿರ್ದೇಶಕರು ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
6. ಉಪ ನಿರ್ದೇಶಕರು (ತಾಂತ್ರಿಕ), ಗ್ರಾಮೂಸೌ ಕೋಶ, ಗ್ರಾಅಪ ಇಲಾಖೆ.
7. ಉಪ ನಿರ್ದೇಶಕರು, TNMC, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
8. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
9. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.